# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 182 |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ |
| ಉತ್ತರಿಸುವ ದಿನಾಂಕ | 05-03-2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಗಾಣಗಾಪುರದ ಶ್ರೀ ಕ್ಷೇತ್ರ ದತ್ತಾತ್ರೇಯ ದೇವಸ್ಥಾನದಲ್ಲಿ ಪ್ರತೀ ತಿಂಗಳು ಸಂಗ್ರಹವಾಗುತ್ತಿರುವ ಹಣ ಎಷ್ಟು; (ಕಳೆದ ಒಂದು ವರ್ಷದ ವಿವರ ನೀಡುವುದು) | ಕಲಬುರಗಿ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಗಾಣಗಾಪುರದ ಶ್ರೀ ಕ್ಷೇತ್ರ ದತ್ತಾತ್ರೇಯ ದೇವಸ್ಥಾನದಲ್ಲಿ ಪ್ರತೀ ತಿಂಗಳು ಸಂಗ್ರಹವಾಗುತ್ತಿರುವ ಹಣದ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. (ಮಾಹೆವಾರು) |
| ಆ) | ಈ ದೇವಸ್ಥಾನದ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಸದರಿ ದೇವಸ್ಥಾನದ ಅಭಿವೃದ್ಧಿಗಾಗಿ ಸರ್ಕಾರವು ಮೀಸಲಿಟ್ಟ ಮತ್ತು ಇದುವರೆವಿಗೂ ಬಿಡುಗಡೆ ಮಾಡಲಾದ ಅನುದಾನ ಎಷ್ಟು? | ಕಲಬುರಗಿ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಗಾಣಗಾಪುರದ ಶ್ರೀ ಕ್ಷೇತ್ರ ದತ್ತಾತ್ರೇಯ ದೇವಸ್ಥಾನದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮಾಸ್ಟರ್ ಪ್ಲಾನ್ ತಯಾರಿಸಲಾಗಿರುತ್ತದೆ.<br>ಕೇಂದ್ರ ಸರ್ಕಾರದ "ಪ್ರಸಾದ" ಯೋಜನೆಯಡಿಯಲ್ಲಿ ರೂ.83.00 ಕೋಟಿ ಅನುದಾನ ಮಂಜೂರು ಮಾಡಲು ಪ್ರವಾಸೋದ್ಯಮ ಇಲಾಖೆ ಮುಖಾಂತರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>ಸರ್ಕಾರದಿಂದ ಅನುದಾನವನ್ನು ಮೀಸಲಿಟ್ಟಿರುವುದಿಲ್ಲ. |
| ಇ) | ಸದರಿ ದೇವಸ್ಥಾನದ ಅಭಿವೃದ್ಧಿಗಾಗಿ ಸರ್ಕಾರ ಸಿದ್ಧಪಡಿಸಿರುವ ವಿಸ್ತೃತ ಯೋಜನಾ ವರದಿಯ ನೀಲಿ ನಕ್ಷೆಯನ್ನು ನೀಡುವುದು; | ಸದರಿ ಮಾಹಿತಿಯು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು. |
| ಈ) | ಇದುವರೆಗೂ ಈ ದೇವಸ್ಥಾನದ ಅಭಿವೃದ್ಧಿಗಾಗಿ ಕೈಗೊಂಡ ಕಾಮಗಾರಿಗಳು ಯಾವುವು; ಮತ್ತು ಯಾವ ಕಾಲಮಿತಿಯಲ್ಲಿ ಉಳಿದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು? (ವಿವರ ನೀಡಿ) | ಸದರಿ ದೇವಾಲಯದಲ್ಲಿ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಭಕ್ತಾದಿಗಳಿಗೆ ಒದಗಿಸಲಾಗುತ್ತಿರುತ್ತದೆ.<br>1. ದೇವಾಲಯದ ಆವರಣದ ಒಳಗಡೆ ಮತ್ತು ಸರದಿ ಸಾಲಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಫ್ಯಾನ್‌ಗಳ ವ್ಯವಸ್ಥೆ ಇರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 2. ವಿಕಲಚೇತನರಿಗೆ ಹಾಗೂ 65 ವರ್ಷ ಮೇಲ್ಪಟ್ಟವರಿಗೆ ಪ್ರತ್ಯೇಕ ಸರದಿ ಸಾಲಿನ ವ್ಯವಸ್ಥೆ ಇರುತ್ತದೆ.<br>3. ಪ್ರಸ್ತಾಪಿತ ದೇವಾಲಯ ಹಾಗೂ ಶ್ರೀ ಸಂಗಮ ದೇವಾಲಯದ ಹತ್ತಿರದಲ್ಲಿ ಪುರುಷ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ.<br>4. ನದಿಯ ದಂಡೆಯಲ್ಲಿ ಮಹಿಳೆಯರಿಗಾಗಿ ಬಟ್ಟೆ ಬದಲಾಯಿಸುವ ಕೊಠಡಿಗಳನ್ನು ನಿರ್ಮಿಸಲಾಗಿದೆ.<br>5. ಭಕ್ತರ ಅನುಕೂಲಕ್ಕಾಗಿ 4 ವಸತಿ ಗೃಹಗಳನ್ನು ನಿರ್ಮಿಸಲಾಗಿದೆ.<br><br>ಉಳಿದ ಕಾಮಗಾರಿಗಳನ್ನು ಕೈಗೊಳ್ಳಲು ಮಾಸ್ಟರ್ ಪ್ಲಾನ್ ತಯಾರಿಸಲಾಗಿದ್ದು, ಅದರಂತೆ, ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ. |

ಕಂಇ 14 ಮುಸಪ್ರ 2025

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು**

ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ಪ್ರತಿ ತಿಂಗಳು ವಿವಿಧ ಸೇವೆಗಳಿಂದ ಸಂಗ್ರಹವಾದ ಹಣದ ವಿವರ.

| ಕ್ರ.ಸಂ | ತಿಂಗಳು | ರೂ: |
|---|---|---|
| 1 | ಏಪ್ರೀಲ್/2024 | 7,73,582=00 |
| 2 | ಮೇ/2024 | 8,12,422=00 |
| 3 | ಜೂನ್/2024 | 11,76,420=00 |
| 4 | ಜುಲೈ/2024 | 6,24,196=00 |
| 5 | ಅಗಷ್ಟ/2024 | 8,44,352=00 |
| 6 | ಸೆಪ್ಟೆಂಬರ್/2024 | 6,15,711=00 |
| 7 | ಅಕ್ಟೋಂಬರ್/2024 | 6,05,590=00 |
| 8 | ನವೆಂಬರ್/2024 | 10,96,038=00 |
| 9 | ಡಿಸೆಂಬರ್/2024 | 15,49,467=00 |
| 10 | ಜನವರಿ/2025 | 10,23,452=00 |
| 11 | ಫೆಬ್ರವರಿ/2025 | 9,46,398=00 |
| 12 | ಇ.ಎಮ್.ಓ:2024-25 | 6,10,250=00 |
| 13 | ದಿ:01.03.2025 ರಿಂದ 03.03.2025 ರ ವರೆಗೆ | 58,860=00 |
| ದಿ:01.04.2024 ರಿಂದ 03.03.2025 ರ ವರೆಗೆ ಒಟ್ಟು: | | 1,07,36,738=00 |

Sd/-

ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ದತ್ತಾತ್ರೇಯ ದೇವಸ್ಥಾನ
ಗಾಣಗಾಪೂರ.